**CC 1096/2019**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಗಳ ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್** 1096/2019

**ಸಿ ಡಬ್ಲ್ಯೂ -1**

**ಪಿ ಡಬ್ಲ್ಯೂ -1**

| | |
|---|---|
| **ಸಾಕ್ಷಿಯ ಹೆಸರು -** | **ಬಿ ಎಂ ಆನಂದ** |
| **ತಂದೆಯ ಹೆಸರು -** | **ಬಿ ಎಂ ಈಶ್ವರಪ್ಪ** |
| **ವಯಸ್ಸು -** | 68 **ವರ್ಷಗಳು** |
| **ಉದ್ಯೋಗ -** | **ವ್ಯಾಪಾರ** |
| **ವಾಸಸ್ಥಳ -** | **ಹೊಸಪೇಟೆ** |

**ಸಾಕ್ಷಿಯನ್ನು ದಿನಾಂಕಃ** 20-06-2025 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ನಾನು ಬಿ ಡಿ ಸಿ ಸಿ ಬ್ಯಾಂಕ್, ಹೊಸಪೇಟೆ ಶಾಖೆಯಲ್ಲಿ ಮೊದಲಿನಿಂದಲೂ ಪಿಗಮಿ ಖಾತೆ ಹೊಂದಿರುತ್ತೇನೆ. ಸದರಿ ಖಾತೆಯಲ್ಲಿ ವರ್ಷವಿಡಿ ಹಣ ತುಂಬಿ, ವರ್ಷದ ಕೊನೆಯಲ್ಲಿ ಹಣವನ್ನು ಬಿಡಿಸಿಕೊಳ್ಳುತ್ತಿದ್ದೆ. 2018 ರಲ್ಲಿ ನಾನು ಬ್ಯಾಂಕ್ ಗೆ ಹೋಗಿ ನನ್ನ ಪಿಗಮಿ ಖಾತೆಯಲ್ಲಿನ ಹಣವನ್ನು ಕೊಡುವಂತೆ ಕೇಳಿದಾಗ ನನ್ನ ಖಾತೆಯಲ್ಲಿ ಯಾವುದೇ ಹಣ ಇರುವುದಿಲ್ಲ ಮತ್ತು ಇದ್ದಂತಹ ಹಣವೆಲ್ಲಾ ಆಗಲೇ ಬಿಡಿಸಿಕೊಳ್ಳಲಾಗಿದೆ ಎಂದು ತಿಳಿಸಿದರು. ನಾನು ಸದರಿ ಬ್ಯಾಂಕ್ ನ ವ್ಯವಸ್ಥಾಪಕರನ್ನು ಭೇಟಿಯಾಗಿ ಸದರಿ ವಿಚಾರ ತಿಳಿಸಿದಾಗ ಸದರಿಯವರು ತಮ್ಮ ಬ್ಯಾಂಕ್ ನ ಸಿಬ್ಬಂದಿಗಳನ್ನು ವಿಚಾರಿಸಿ ವಿಷಯ ತಿಳಿಸುತ್ತೇನೆ ಎಂದು ಹೇಳಿ ಕಳುಹಿಸಿದರು. ಸದರಿಯವರು ನನಗೆ ಯಾವುದೇ ವಿಚಾರ ತಿಳಿಸಲಿಲ್ಲ . ನಾನು ನನ್ನ ಹಾಗೇ ಪಿಗಮಿ ಖಾತೆಯಲ್ಲಿ ಹಣ ಇಟ್ಟಿದ್ದ ಇಬ್ಬರು ಮೂವರನ್ನು ವಿಚಾರಿಸಿದಾಗ ಅವರುಗಳು  ಬ್ಯಾಂಕ್ ನ ಸಿಬ್ಬಂದಿಗಳು ಖಾತೆದಾರರ ಖೊಟ್ಟಿ ಸಹಿಗಳನ್ನು ಮಾಡಿ ಹಣ ಬಿಡಿಸಿಕೊಂಡಿರುತ್ತಾರೆ ಎಂದು ತಿಳಿಸಿದರು.

ನಾನು ಪಟ್ಟಣ ಪೋಲಿಸ ಠಾಣೆಗೆ ಹೋಗಿ ಈ ಬಗ್ಗೆ ದೂರನ್ನು ನೀಡಿದ್ದೆ. ಸದರಿ ಪೋಲಿಸರು ಈ ಪ್ರಕರಣದಲ್ಲಿ ವಿಚಾರಣೆ ಮಾಡಿ ತಿಳಿಸುತ್ತೇವೆ ಎಂದು ತಿಳಿಸಿದರು. ನನ್ನ ಖಾತೆಯಲ್ಲಿ ರೂ. 2,97,000/- ಹಣ ಜಮಾ ಮಾಡಿದ್ದೆ. ನನ್ನ ಸಹಿಗಳನ್ನು ಹರೀಶ, ಮಂಜುಳಾ ಮತ್ತು ಇನ್ನಿತರೆ ಸಿಬ್ಬಂದಿಗಳು ನಕಲು ಮಾಡಿ ಹಣವನ್ನು ಬಿಡಿಸಿಕೊಂಡಿರುತ್ತಾರೆ. ಪಿಗಮಿ ಹಣವನ್ನು ಮಂಜು ಎಂಬುವವರು ಸಂಗ್ರಹಿಸುತ್ತಿದ್ದರು. ನನ್ನ ಹಣವನ್ನು ಆರೋಪಿತರು ನನ್ನ ಸಹಿ ನಕಲು ಮಾಡಿ ಬಿಡಿಸಿಕೊಂಡು ಉಪಯೋಗಿಸಿರುತ್ತಾರೆ.

ನಾನು ನ್ಯಾಯಾಲಯಕ್ಕೆ ಸಲ್ಲಿಸಿದ್ದ ಖಾಸಗಿ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ದೂರು ನೋಡಿ ಗುರುತಿಸಿದ್ದು, ಅದನ್ನು ನಿಪಿಃ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 1 (ಎ) ಎಂದು ಗುರುತಿಸಲಾಯಿತು.

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಕೃತ್ಯ ಸ್ಥಳ ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿಃ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 2(ಎ) ಎಂದು ಗುರುತಿಸಲಾಯಿತು.

ಈಗ ನಾನು ನೋಡುತ್ತಿರುವ 4 ಪೋಟೋಗಳಲ್ಲಿನ ವ್ಯಕ್ತಿ ನಾನೇ ಇರುತ್ತೇನೆ. ಸದರಿ ಪೋಟೋಗಳನ್ನು ಒಟ್ಟಾಗಿ ನಿಪಿಃ 3 ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ಬಿ ಡಿ ಸಿ ಸಿ ಬ್ಯಾಂಕ್ ನ ಕಚೇರಿಯಲ್ಲಿ ಮಾಡಿರುತ್ತೇನೆ. ನನ್ನೊಂದಿಗೆ ಚಾಸಾ -2 ಮತ್ತು 3 ರವರು ಹಾಜರು ಇದ್ದರು. ಸದರಿ ಪಂಚನಾಮೆಯನ್ನು 2019 ರಲ್ಲಿ ಮಾಡಿರುತ್ತಾರೆ. ಆಗ ಸಮಯ ಸಂಜೆ 05.45 ಗಂಟೆ ಆಗಿತ್ತು.

**CC 1096/2019**

**ಸಿ ಡಬ್ಲೂ -1**
**ಪಿ ಡಬ್ಲೂ -1**

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಕೋರಿಕೆ ಬರಹಗಳ ಜಪ್ತು ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿಃ **4** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **4(ಎ)** ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ಬ್ಯಾಂಕ್ ನಲ್ಲಿ ಮಾಡಿರುತ್ತೇನೆ. ನನ್ನೊಂದಿಗೆ ಚಾಸಾ **-8** ಮತ್ತು **9** ರವರು ಹಾಜರು ಇದ್ದರು. ಸದರಿ ಪಂಚನಾಮೆಯನ್ನು **2019** ರಲ್ಲಿ ಮಾಡಿರುತ್ತಾರೆ. ಆಗ ಸಮಯ ಸಂಜೆ **05.45** ಗಂಟೆ ಆಗಿತ್ತು.

ಈಗ ನಾನು ನೋಡುತ್ತಿರುವ ದಾಖಲೆಗಳಲ್ಲಿನ ಬರಹಗಳು ನನ್ನವೇ ಆಗಿರುತ್ತವೆ. ಸಾಕ್ಷಿ ಆರ್ **7** ರಿಂದ ಆರ್ **12** ಎಂದು ಗುರುತಿಸಲಾಗಿರುವ ಅಕ್ಷರಗಳಿರುವ **6** ದಾಖಲೆಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿಃ **5** ರಿಂದ **10** ಎಂದು ಗುರುತಿಸಲಾಯಿತು.

ನಾನು ಪೋಲಿಸರಿಗೆ ಬರೆದುಕೊಟ್ಟಿದ್ದ ಪ್ರಮಾಣ ಪತ್ರದಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಪ್ರಮಾಣ ಪತ್ರದಲ್ಲಿನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿಃ **11** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **11 (ಎ)** ಎಂದು ಗುರುತಿಸಲಾಯಿತು.

ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ನನ್ನ ಖಾತೆಯ ಸ್ಟೇಟ್ ಮೆಂಟ್ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಮೂಲ ಸ್ಟೇಟ್ ಮೆಂಟ್ ನೋಡಿ ಗುರುತಿಸಿದ್ದು, ಅದನ್ನು ನಿಪಿಃ **12** ಎಂದು ಗುರುತಿಸಲಾಯಿತು. ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲು ಆರೋಪಿ ಪರ ಶ್ರೀ  ಎಂ ಕೆ.,  ವಕೀಲರಿಂದಃ**

ಪಾಟೀ ಸವಾಲಿಗಾಗಿ ಸಮಯ ಕೋರಿದ್ದು , ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.